ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ನ್ಯಾಯಾಲಯ, ಕೆ.ಆರ್.ನಗರ

**ಸಿ.ಸಿ. ನಂ.504/2015**

| | | | |
|---|---|---|---|
| ಸಾಕ್ಷಿಯ ಹೆಸರು | ಶೆಟ್ಟಿಗೌಡ | | |
| ತಂದೆ /ಗಂಡ ಹೆಸರು | ಚಿಕ್ಕೇಗೌಡ | | |
| ವಯಸ್ಸು | **85** | | |
| ಉದ್ಯೋಗ | ನಿವೃತ್ತಿ ಹೊಂದಿರುತ್ತಾರೆ. | ಪ್ರಾಸಾ | **8** |
| ವಾಸ ಸ್ಥಳ | ರಾಂಪುರ | ಚಾಸಾ | **9** |

ಸಾಕ್ಷಿಗ ಪ್ರಮಾಣ ವಚನ ಬೋಧಿಸಲಾಯಿತು.

ದಿನಾಂಕ ಃ **22-01-2018.**

ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದಃ-

ಚಾಸಾ-**1** ರಿಂದ **4** ಗೊತ್ತು, ನ್ಯಾಯಾಲಯದ ಮುಂದೆ ನಿಂತಿರುವ ಆರೋಪಿತರು ಗೊತ್ತು. ಮೃತ ನಿಂಗಮ್ಮ ನನಗೆ ಗೊತ್ತು. ಆರೋಪಿತರಿಗೂ ಮತ್ತು ಚಾಸಾ-**1** ರವರ ಮಧ್ಯೆ ಇದ್ದ ವಿವಾದಗಳು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಘಟನೆ ನಡೆದಿರುವುದಿಲ್ಲ. ನನ್ನ ಸಮಕ್ಷಮ ಯಾರು ಹೊಡೆದಾಟ ಮಾಡಿರುವುದಿಲ್ಲ ಮತ್ತು ಆರೋಪಿತರು ಬೈದಿರುವುದಿಲ್ಲ. ನಿಂಗಮ್ಮ ಯಾವ ರೀತಿ ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿತರು ಮತ್ತು ಪಿರ್ಯಾದುದಾರರ ನಡುವೆ ನಡೆದ ಜಗಳವನ್ನು ನಾನು ಬಿಡಿಸಿರುವುದಿಲ್ಲ. ನಾನು ಪೋಲಿಸರಿಗೆ ಹೇಳಿಕೆ ನೀಡಿರುವುದಿಲ್ಲ. ಮೃತ ನಿಂಗಮ್ಮನಿಗೆ ಹೊಡೆದಿರುವುದನ್ನು ನಾನು ನೋಡಿರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೇನು ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ ಮು.ಮಾ.1 ನ್ನು ಸಾಕ್ಷಿಗೆ ತೋರಿಸಿ, ಅದನ್ನು ಗುರುತಿಸಿರುವುದಿಲ್ಲ.

ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಎಪಿಪಿರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.

ಪಾಟೀ ಸವಾಲುಃ ಮಾನ್ಯ ಎಪಿಪಿರವರಿಂದಃ-

ಚಾಸಾ-**1** ಮತ್ತು **1** ನೇ ಆರೋಪಿಯ ಮಧ್ಯೆ ಸೈಟಿನ ವಿಚಾರವಾಗಿ ಗಲಾಟೆ ಇರುವ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ. ದಿನಾಂಕ **26-9-2014** ರಂದು ಸಂಜೆ **6.30** ಗಂಟೆಗೆ ಚಾಸಾ-**2** ಮತ್ತು **3** ಆರೋಪಿತರ ಮನೆಯ ಮುಂದೆ ತಮ್ಮ ಹಿತ್ತಲಿಗೆ ನಡೆದುಕೊಂಡು ಹೋಗುತ್ತಿರುವಾಗ,

ಆರೋಪಿತರೆಲ್ಲರೂ ಅವರನ್ನು ಅಸಭ್ಯವಾಗಿ ಬೈಯ್ಯುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿತರು ಬೋಳಿಮುಂಡೆ, ಸೂಳೇಮುಂಡೆ ಎಂದು ಅವ್ಯಾಚ ಶಬ್ಧಗಳಿಂದ ಚಾಸಾ-1 ರಿಂದ 4 ರವರಿಗೆ ಬೈದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ಮತ್ತು ಚಾಸಾ-1 ರ ನಡುವೆ ನೂಕಾಟ ಆಗುತ್ತಿತ್ತು ಎಂದರೆ ಸರಿಯಲ್ಲ. ಆಗ ಮೃತ ನಿಂಗಮ್ಮ ಜಗಳ ಬಿಡಿಸಲು ಬಂದರು ಎಂದರೆ ಸರಿಯಲ್ಲ. ಸುಕನ್ಯಾ ನಿಂಗಮ್ಮನನ್ನು ಸೂಳೇಮುಂಡೆ ಎಂದು ಬೈದಿರುತ್ತಾರೆ ಎಂದರೆ ಸರಿಯಲ್ಲ. ಸುಕಾನ್ಯ ನಿಂಗಮ್ಮನನ್ನು ಗೋಡೆ ಕಡೆ ತಳ್ಳಿದರು, ಆಗ ಮೃತ ನಿಂಗಮ್ಮ ಕೆಳಕ್ಕೆ ಬಿದ್ದಿರುತ್ತಾರೆ ಎಂದರೆ ಸರಿಯಲ್ಲ. ಮಂಜುನಾಥ ನಿಂಗಮ್ಮನ ಊರುಗೋಲು ಎತ್ತಿಕೊಂಡು, ನಿಂಗಮ್ಮನ ಎಡಗಾಲಿನ ತೊಡೆಗೆ ಹೊಡೆದು ಗಾಯಪಡಿಸಿದರು ಎಂದರೆ ಸರಿಯಲ್ಲ. ಆಗ ನಾನು, ರಾಜೇಗೌಡ, ಶೆಟ್ಟಿಗೌಡ, ಪ್ರತಾಪ್ ಜಗಳ ಬಿಡಿಸಿರುತ್ತೇವೆ ಎಂದರೆ ಸರಿಯಲ್ಲ. ನಿಂಗಮ್ಮ ಆಸ್ಪತ್ರೆಯಲ್ಲಿ ತೋರಿಸಿದಾಗ ಅವರಿಗೆ ಕಾಲು ಮುರಿದಿರುವ ವಿಚಾರ ಗೊತ್ತಾಯಿತು ಎಂದರೆ ಸರಿಯಲ್ಲ. ನಂತರ ಆಸ್ಪತ್ರೆಯಲ್ಲಿ ನಿಂಗಮ್ಮ ಮೃತಪಟ್ಟಿರುವ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ. ಈ ಘಟನೆ ಬಗ್ಗೆ ಈಗ ಓದಿ ಹೇಳಿದಂತೆ ದಿನಾಂಕ 2-10-2014 ರಂದು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆಯನ್ನು ನಿಪಿ-7 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಮು.ಮಾ.1 ರಿಂದ ಮಂಜುನಾಥ್ ನಿಂಗಮ್ಮನಿಗೆ ಹೊಡೆದು ಗಾಯ ಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲಾ ವಿಷಯ ಗೊತ್ತಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.
ಆರೋಪಿತು ಪಾಟೀ ಸವಾಲು ಇಲ್ಲಾ ಎಂದು ಹೇಳಿರುತ್ತಾರೆ.
ಮರು ವಿಚಾರಣೆ-ಇಲ್ಲಾ.
(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ.ಕೇ.ಸ.ಇ.ಒ.,

(ಶ್ರೀನಾಥ್.ಕೆ.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.